**37** ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

ಸಿ.ಸಿ. ನಂ. **13412/2019**

ಪ್ರಾ.ಸಃ **3** ಚಾ.ಸಃ **5**

| | |
|---|---|
| ಸಾಕ್ಷಿದಾರರ ಹೆಸರು | ಆನಂದ್ |
| ತಂದೆಯ ಹೆಸರು | ಲಕ್ಷ್ಮಯ್ಯ |
| ವಯಸ್ಸು | 35 ವರ್ಷ |
| ಉದ್ಯೋಗ | ಚಾಲಕ |
| ವಿಳಾಸ | ಜೆ.ಪಿ. ನಗರ ಬೆಂಗಳೂರು. |
| ಪ್ರ. ವ. ಬೋ ದಿನಾಂಕ | 29/04/2022. |

ಮುಖ್ಯ ವಿಚಾರಣೆಃ ಮಾನ್ಯ ಹಿ.ಸ.ಸ. ಅ ರವರಿಂದಃ

ನನಗೆ ಚಾಸಾ.1 ರವರ ಪರಿಚಯವಿಲ್ಲ ಮತ್ತು ಆರೋಪಿತರ ಪರಿಚಯ ಇಲ್ಲ. ದಿ. 31/08/2018 ರಂದು ನಾನು ನನ್ನ ಬೈಕನ್ನು ಚಾಸಾ.4 ರವರ ಬಳಿ ಸರ್ವಿಸ್ ಗೆ ಬಿಟ್ಟಿದ್ದು ಸದರಿ ಬೈಕನ್ನು ವಾಪಸ್ಸು ಪಡೆಯಲು ಹೋಗಿದ್ದಾಗ ಆರೋಪಿತರು ಮತ್ತು ಚಾಸಾ.1 ರವರ ನಡುವೆ ಗಲಾಟೆಯಾಗಿದ್ದ ಬಗ್ಗೆ ಪೊಲೀಸರು ಗಲಾಟೆ ನಡೆದ ಸ್ಥಳದಲ್ಲಿ ಪಂಚನಾಮೆ ಮಾಡಿ ಒಂದು ಹೆಲ್ಮೆಟ್ ನ್ನು ಅಮಾನತ್ತು ಪಡಿಸಿಕೊಂಡುದ ಸದರಿ ಪಂಚನಾಮೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದೆ, ನಿಪಿ.2 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಪೊಲೀಸರು ಆ ದಿನ ಅಮಾನತ್ತು ಪಡಿಸಿಕೊಂಡ ಹೆಲ್ಮೆಟನ್ನು ಈಗ ನೋಡುತ್ತಿದ್ದು ಅದನ್ನು ಎಂ.ಒ-1 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ಆರ್.ಎಸ್. ಆರೋಪಿ ಪರ ವಕೀಲರಿಂದಃ

ಪಂಚನಾಮೆಗೆ ಬರುವಂತೆ ಪೊಲೀಸರು ನನಗೆ ಲಿಖಿತವಾಗಿ ನೋಟಿಸ್ ನೀಡಿರಲಿಲ್ಲ. ಚಾಸಾ.1 ನನಗೆ ಸ್ನೇಹಿತರು ಎಂದರೆ ಸರಿ. ನಾನು ಸುಂದರ ಮೂರ್ತಿ ವಿರುದ್ದ ಎರಡು

ಪ್ರಕರಣಗಳಲ್ಲಿ ಪಂಚ ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆ. ಸಂಜೆ 06.30 ಕ್ಕೆ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ಪೊಲೀಸರು ಬರೆದಿರುತ್ತಾರೆ ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಕೈಯಲ್ಲಿ ಬರವಣಿಗೆ ಮಾಡಿರುತ್ತಾರೆ. ನಿಪಿ.2 ಕ್ಕೆ ಪೊ.ಠಾಣೆಯಲ್ಲಿ ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ಚಾಸಾ.1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ